ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 : ದಿನಾಂಕ : 06–01–2020**

# ಪತ್ರಿಕಾ ಆಮಂತ್ರಣ

## ಉಪ ರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅವರ ಕಾರ್ಯಕ್ರಮಗಳು:

(ಬೆಂಗಳೂರು ಪೊಲೀಸ್ ಆಯುಕ್ತರಿಂದ ಅಧೀಕೃತ ಪ್ರವೇಶ ಪತ್ರ ಹೊಂದಿರುವವರಿಗೆ ಮಾತ್ರ ಈ ಕಾರ್ಯಕ್ರಮಗಳಿಗೆ ಪ್ರವೇಶವಿರುತ್ತದೆ ಹಾಗೂ ಕಾರ್ಯಕ್ರಮದ ಒಂದು ಗಂಟೆಗೂ ಮುಂಚಿತವಾಗಿ ಮಾಧ್ಯಮದವರಿಗೆ ಮೀಸಲಿರಿಸಿದ ಸ್ಥಳದಲ್ಲಿ ಆಸೀನರಾಗಿರಬೇಕು)

1. ವಿಶ್ವೇಶ್ವರ ತೀರ್ಥ ಸ್ವಾಮೀಜಿ ಅವರ ಬೃಂದಾವನ ಭೇಟಿ
   ಸ್ಥಳ: ಪೂರ್ಣ ಪ್ರಜ್ಞ ವಿದ್ಯಾಪೀಠ, ವಿದ್ಯಾಪೀಠ ಸರ್ಕಲ್, ಕತ್ರಿಗುಪ್ಪೆ ಮುಖ್ಯ ರಸ್ತೆ, ಬೆಂಗಳೂರು
   ದಿನಾಂಕ : 07–01–2020, ಮಂಗಳವಾರ, ಬೆಳಿಗ್ಗೆ 8–45 ಗಂಟೆಗೆ

2. ಅದಮ್ಯ ಚೇತನ ಗ್ರೀನ್ ಕಿಚನ್ ಭೇಟಿ
   ಸ್ಥಳ: ಅದಮ್ಯ ಚೇತನ, ಗವಿಪುರಂ, ಗುಟ್ಟಳ್ಳಿ, ಬೆಂಗಳೂರು.
   ದಿನಾಂಕ : 07–01–2020, ಮಂಗಳವಾರ ಬೆಳಿಗ್ಗೆ 9–25 ಗಂಟೆಗೆ

3 "NAAC Silver Jubilee Celebrations"

Chief Guest :

M. Venkaiah Naidu,
Vice-President of India

Guest of Honour :

Vajubhai Vala,

Governor of Karnataka

Guest of Honour :

B.S. Yediyurappa,
Chief Minister of Karnataka

Date : 07-01-2020 Tuesday Time : 11-00 hrs.
Venue : Raj Bhavan, Bengaluru

4.Valedictory Programme of 107th Indian Science Congress Conference :

Muppavarapu Venkaish Naidu,
Vice President of India.

Guest of Honour:

B.S. Yediyurappa,
Chief Minister of Karnataka.

D.V. Sadananda Gowda,
Minister of Chemicals and Fertilizers
Government of India.

Date: 07-01-2020, Tuesday, Time: 4.30 pm
Venue: Dr. Babu Rajendra Prasad International Convention Centre, GKVK. Bengaluru.

Special Note: Vehicle arrangement has been made from Bengaluru Press Club, Cubbon Park, Bengaluru at 9.30 am. and 2-30 p.m.

Contact No: Mr. Harish Shetty, Mob No. 99004 45853.
Mr. Narayana, Mob. No. 99167 48859.

5. ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ಹೆಚ್ಚುವರಿ ನ್ಯಾಯಮೂರ್ತಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭ :

ದಿನಾಂಕ : 07–01–2020, ಮಂಗಳವಾರ, ಸಮಯ: ಸಂಜೆ 5–30 ಗಂಟೆಗೆ

ಸ್ಥಳ : ರಾಜಭವನದ ಗಾಜಿನ ಮನೆ, ಬೆಂಗಳೂರು

ಪತ್ರಿಕಾ ಪ್ರಕಟಣೆ

<u>ಸಚಿವರ ಪ್ರವಾಸ</u>

ಬೆಂಗಳೂರು, ಜನವರಿ 6 (ಕರ್ನಾಟಕ ವಾರ್ತೆ)

ಕಂದಾಯ ಸಚಿವ ಆರ್. ಅಶೋಕ್ ಅವರು ಜನವರಿ 7 ರಂದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಸಂಜೆ ನಗರಕ್ಕೆ ಹಿಂತಿರುಗುವರು.

**Justice Sreenivase Gowda, Former Judge, appointed as Chairman, Karnataka Real Estate Appellate Tribunal**

**Bengaluru, Jan 6 (Karnataka Information)**

**The Government of India has enacted The Real Estate (Regulation and Development) act 2016 to redress the grievances regarding Real Estate disputes. Prior to establishment of the Tribunal, the cases relating to Real Estate Regulatory Authority were dealt with by the Karnataka Appellate Tribunal, Multistoried Building, Bengaluru, as an Interim Tribunal. The Government of Karnataka established the Karnataka Real Estate Tribunal with effect from 3rd January 2020, which is now functioning at No. 1/ 14, 2nd Floor, Silver Jubilee Block (South Wing) Behind Unity Building, CSI Compound, 3rd Cross, Mission Road, Bengaluru - 560 027.**

**Justice Sreenivase Gowda, Former Judge, High Court of Karnataka, has been appointed as Chairman of the Tribunal. Sri. K.P. Dinesh, former**

**District Judge, has been appointed as Member (Judicial) and Sri P.S. Somashekar, IFS (R) has been appointed as Member (Administration).**

**As per the provisions of Act, 2016 any order passed by the Karnataka Real Estate Regulatory Authority or Adjudicating Officer, an appeal can be preferred to The Karnataka Real Estate Appellate Tribunal and the jurisdiction of the Tribunal extends to the entire State of Karnataka says official press release.**

## ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ತ್ರೈವಾರ್ಷಿಕ ಚುನಾವಣೆ ಫೆಬ್ರವರಿ 23 ರಂದು ಮತದಾನ

ಬೆಂಗಳೂರು, ಜನವರಿ 6 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ರಾಜ್ಯದ ಜನಸಾಮಾನ್ಯರಲ್ಲಿ, ವಿದ್ಯಾರ್ಥಿಗಳಲ್ಲಿ ಹಾಗೂ ಶಿಕ್ಷಕರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಲು 1989ರಲ್ಲಿ ಸ್ಥಾಪನೆಗೊಂಡು ನಿರಂತರವಾಗಿ ಶ್ರಮಿಸುತ್ತಿರುವ ಸಂಸ್ಥೆಯಾಗಿದೆ. ಖ್ಯಾತ ವಿಚಾರವಾದಿಗಳು ಹಾಗೂ ಶಿಕ್ಷಣ ತಜ್ಞರೂ ಆಗಿದ್ದ ಡಾ. ಎಚ್. ನರಸಿಂಹಯ್ಯನವರು ವಿಜ್ಞಾನ ಪರಿಷತ್ತಿನ ಸ್ಥಾಪಕ ಅಧ್ಯಕ್ಷರಾಗಿ ಭದ್ರ ಬುನಾದಿಯನ್ನು ಹಾಕಿಕೊಟ್ಟಿದ್ದಾರೆ. ದೇಶದ ಅತ್ಯುನ್ನತ ವಿಜ್ಞಾನಿಯಾದ ಭಾರತರತ್ನ ಪ್ರೊ|| ಸಿ.ಎನ್.ಆರ್. ರಾವ್ ಅವರು ಇಂದು ವಿಜ್ಞಾನ ಪರಿಷತ್ತಿನ ಮಹಾಪೋಷಕರಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ. ಪರಿಷತ್ತು ಸ್ಥಾಪನೆಗೊಂಡ ದಿನಗಳಿಂದಲೂ ವೈಜ್ಞಾನಿಕ ಮನೋಭಾವನೆ ಬೆಳೆಸುವ ದೃಷ್ಟಿಯಲ್ಲಿ ದೇಶದ ಭವಿಷ್ಯತ್ತಿನ ನಾಗರೀಕರಾದ ಮಕ್ಕಳು, ಶಿಕ್ಷಕರು ಹಾಗೂ ಮಹಿಳೆಯರು ಸೇರಿದಂತೆ ಜನಸಾಮಾನ್ಯರಿಗಾಗಿ ವರ್ಷದುದ್ದಕ್ಕೂ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ ಬಂದಿದೆ.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾಗಿದ್ದು ಪ್ರಸ್ತುತ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 2019–22ನೇ ಅವಧಿಯ ತ್ರೈವಾರ್ಷಿಕ ಚುನಾವಣೆಯ ವೇಳಾಪಟ್ಟಿಯನ್ನು (Calender of events) ಪ್ರಕಟಿಸಲಾಗಿರುತ್ತದೆ. ವಿಜ್ಞಾನ ಪರಿಷತ್ತು ಒಟ್ಟು 8385 ಸದಸ್ಯರನ್ನು ಒಳಗೊಂಡಿದ್ದು, ಇವರು ರಾಜ್ಯದ 4 ಕಂದಾಯ ವಿಭಾಗಗಳಾದ ಬೆಳಗಾವಿ, ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ ತಲಾ 6 ಜನರಂತೆ ಒಟ್ಟು 24 ಪ್ರತಿನಿಧಿಗಳನ್ನು ಚುನಾಯಿಸಲಿದ್ದಾರೆ. ಇವುಗಳಲ್ಲಿ ಬೆಳಗಾವಿ ವಿಭಾಗದಿಂದ ಓರ್ವ ಮಹಿಳೆ ಹಾಗೂ ಕಲಬುರಗಿ ವಿಭಾಗದಿಂದ ಓರ್ವ ಎಸ್.ಸಿ. / ಎಸ್.ಟಿ ಸಮುದಾಯದ ಪ್ರತಿನಿಧಿಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಆಸಕ್ತ ಪರಿಷತ್ತಿನ ಸದಸ್ಯರು ಜನವರಿ 6 ರಿಂದ ಜನವರಿ 16 ರೊಳಗೆ ಆಯಾ ವಿಭಾಗದಲ್ಲಿ ನಾಮಪತ್ರ ಸಲ್ಲಿಸಬಹುದಾಗಿದ್ದು, ಜನವರಿ 27 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಫೆಬ್ರವರಿ 23 ರಂದು ನಿಗದಿಪಡಿಸಿದ ಚುನಾವಣಾ ಕೇಂದ್ರಗಳಲ್ಲಿ ಚುನಾವಣೆ ನಡೆಯಲಿದೆ.

ವಿಜ್ಞಾನ ಪರಿಷತ್ತಿನ ಚುನಾವಣೆ ಕುರಿತಾದ ಪ್ರಕಟಣೆಗಳನ್ನು ನಿರಂತರವಾಗಿ ಕರಾವಿಪ ವೆಬ್‌ಸೈಟ್‌ನಲ್ಲಿ (www.krvp.org) ಪ್ರಕಟಿಸಲಾಗುತ್ತದೆ. ಆಸಕ್ತರು ಹೆಚ್ಚಿನ ವಿವರಗಳಿಗಾಗಿ ಕರಾವಿಪ ವೆಬ್‌ಸೈಟಿಗೆ ಭೇಟಿ ನೀಡಲು ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ತ್ರೈವಾರ್ಷಿಕ ಚುನಾವಣೆ ಮೊ. 9148700666 ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವರ ಪ್ರವಾಸ

ಬೆಂಗಳೂರು, ಜನವರಿ 6 (ಕರ್ನಾಟಕ ವಾರ್ತೆ)

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಕಾಲ ಹಾಗೂ ಕಾರ್ಮಿಕ ಸಚಿವ ಎಸ್. ಸುರೇಶ್‌ಕುಮಾರ್ ಅವರು ಜನವರಿ 7 ರಿಂದ 8 ರವರೆಗೆ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಜನವರಿ 8 ರಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.

## ಉಪ ರಾಷ್ಟ್ರಪತಿಗಳ ಆಗಮನ

ಬೆಂಗಳೂರು, ಜನವರಿ 6 (ಕರ್ನಾಟಕ ವಾರ್ತೆ)

ಭಾರತದ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ಎರಡು ದಿನಗಳ ಅಧಿಕೃತ ರಾಜ್ಯ ಭೇಟಿಗಾಗಿ ಇಂದು ಸಂಜೆ ಬೆಂಗಳೂರಿಗೆ ಆಗಮಿಸಿದರು. ನಗರದ ಎಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿ ಉಪರಾಷ್ಟ್ರಪತಿ ಅವರನ್ನು ಉಪ ಮುಖ್ಯಮಂತ್ರಿ ಡಾ: ಸಿ. ಎನ್. ಅಶ್ವಥ್‌ನಾರಾಯಣ ಅವರು ಆತ್ಮೀಯವಾಗಿ ಬರಮಾಡಿಕೊಂಡರು. ಬೆಂಗಳೂರು ಕೇಂದ್ರೀಯ ಲೋಕಸಭಾ ಕ್ಷೇತ್ರದ ಸದಸ್ಯ ಪಿ. ಸಿ. ಮೋಹನ್, ಬೆಂಗಳೂರು ಮಹಾಪೌರರಾದ ಗೌತಮ್‌ಕುಮಾರ್, ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಶ್ರೀಮತಿ ವಂದಿತಾ ಶರ್ಮ, ಬೆಂಗಳೂರು ಪೊಲೀಸ್ ಆಯುಕ್ತ ಭಾಸ್ಕರರಾವ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಬಿ.ಆರ್. ರವಿಕಾಂತೇಗೌಡ ಅವರು ಈ ಸಂದರ್ಭದಲ್ಲಿ ಹಾಜರಿದ್ದರು.

ಉಪ ರಾಷ್ಟ್ರಪತಿ ಅವರು ನಾಳೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದು ಬೆಳಿಗ್ಗೆ ವಿಶ್ವೇಶ್ವರ ತೀರ್ಥ ಸ್ವಾಮೀಜಿ ಅವರ ಬೃಂದಾವನ ಭೇಟಿ, ಅದಮ್ಯ ಚೇತನ ಗ್ರೀನ್ ಕಿಚನ್ ಭೇಟಿ, ರಾಜಭವನದಲ್ಲಿ ಹಮ್ಮಿಕೊಂಡಿರುವ "ಓಂಂಅ" ಬೆಳ್ಳಿಹಬ್ಬ ನಂತರ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಮ್ಮಿಕೊಂಡಿರುವ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. (ಛಾಯಾಚಿತ್ರ ಲಗತ್ತಿಸಿದೆ)